ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಈ ವರ್ಷದ ಜುಲೈ ತಿಂಗಳಲ್ಲಿ ಎಲ್ಲಾ ಘಟಕಗಳ ಕೆಲಸಗಳು ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ಆ) ರೂ. 674.38 ಕೋಟಿಗಳು

ಇ) ರೂ. 433.64 ಕೋಟಿಗಳು (ದಿನಾಂಕ 22.01.2005 ರವರೆಗೆ)

ಈ) ಸುಮಾರು 241 ಕೋಟಿ ರೂಪಾಯಿಗಳು.

824 (1168) ಶ್ರೀ ರೇವು ನಾಯಕ್ ಬೆಳಮಗಿ(ಕಮಲಪುರ್): ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕಮಲಾಪುರ ಮತಕ್ಷೇತ್ರ ವ್ಯಾಪ್ತಿಯ ಲೋಕೋಪಯೋಗಿ ರಸ್ತೆಗಳಾದ ಆಳಂದ–ಉಮರ್ಗಾ ಬಾರ್ಡರ್ ರಸ್ತೆ ಆಳಂದ–ವಿ.ಕೆ. ಸಲಗರ–, ಮಹಾಗಾವ್–ಸುಲೇಪೇಟ ರಸ್ತೆ, ಚಿಂಚನೂರು–ಬೋದನ ರಸ್ತೆ, ಕಡಗಂಚಿ–ವಿ.ಕೆ. ಸಲಗರ–ನರೋಣ–ಬಸವಕಲ್ಯಾಣ ಬಾರ್ಡರ್ ರಸ್ತೆ, ಗುಲ್ಬರ್ಗಾ–ಆಳಂದ–ಉಮರ್ಗಾ ಬಾರ್ಡರ್ ರಸ್ತೆ ಸಂಪೂರ್ಣವಾಗಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರಸ್ತೆಗಳ ಮರು ಡಾಂಬರೀಕರಣ ಹಾಗೂ ಅಭಿವೃದ್ಧಿಗಾಗಿ ಸರ್ಕಾರ ಎಷ್ಟು ಹಣ ಮಂಜೂರು ಮಾಡಿದೆ;

ಇ) ರಸ್ತೆ ಕಾಮಗಾರಿ ಪ್ರಾರಂಭವಾಗುವುದು ಯಾವಾಗ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಬಂದಿರುತ್ತದೆ.

ಆ) ಈ ರಸ್ತೆಗಳ ಮರು ಡಾಂಬರೀಕರಣ ಹಾಗೂ ಅಭಿವೃದ್ಧಿಗಾಗಿ ಅನುದಾನವನ್ನು ಬಿಡುಗಡೆ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ಆದರೆ ಸದರಿ ರಸ್ತೆಗಳ ನಿರ್ವಹಣೆಗಾಗಿ ರೂ. 17.12 ಲಕ್ಷಗಳು ಬಿಡುಗಡೆ ಮಾಡಲಾಗಿದೆ.

ಇ) ಜಿಲ್ಲಾ ಮುಖ್ಯ ರಸ್ತೆಗಳ ಮೇಲೆ ಗುಂಡಿ ಮುಚ್ಚುವ ಕಾಮಗಾರಿಯ ಈಗಾಗಲೇ ಪ್ರಗತಿಯಲ್ಲಿದ್ದು ರಾಜ್ಯ ಹೆದ್ದಾರಿಗಳ ದುರಸ್ತಿ ಕಾಮಗಾರಿಯನ್ನು ಶೀಘ್ರದಲ್ಲಿಯೇ ಪ್ರಾರಂಭಿಸಲಾಗುವುದು.

825 (1169) ಶ್ರೀ ರೇವು ನಾಯಕ್ ಬೆಳಮಗಿ(ಕಮಲಪುರ್): ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಭೂ ಒಡೆತನ ಯೋಜನೆಯಲ್ಲಿ ಎಷ್ಟು ಜನ ಫಲಾನುಭವಿಗಳಿಗೆ 1994–95ನೇ ಸಾಲಿನಲ್ಲಿ ಜಮೀನು ಮಂಜೂರು ಮಾಡಲಾಗಿದೆ. (ವಿವರವನ್ನು ಫಲಾನುಭವಿವಾರು ಮಂಜೂರು ಮಾಡಿರುವ ಜಮೀನುವಾರು ನೀಡುವುದು);

ಆ) ಗುಲ್ಬರ್ಗ ಜಿಲ್ಲೆ ಹಿಂದುಳಿದ ಕ್ಷೇತ್ರವಾದ ಕಮಲಾಪುರ ಮತಕ್ಷೇತ್ರದಲ್ಲಿ ಭೂ ಒಡೆತನ ಯೋಜನೆ ಎಷ್ಟು ಕಡತಗಳು ಮಂಜೂರಾತಿಗಾಗಿ ಬಾಕಿ ಇವೆ;